**ದಿಃ 17-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದಃ-**

ನಾನು ಸರ್ವೆ ನಂ.29 ಕ್ಕೆ ಸಂಬಂಧಪಟ್ಟ ಒಟ್ಟು 4 ಗಣಕೀಕೃತ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ 4 ಎಂದು ಗುರುತಿಸಲಾಯಿತು. ನಾನು ತಹಶೀಲ್ದಾರ್ ರವರು ದಿನಾಂಕ 09.11.2003 ರಂದು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಡಿ -5 ಎಂದು ಗುರುತಿಸಲಾಯಿತು. ನಾನು ಯಲ್ಲವ್ವ, ಬಾಳಪ್ಪ, ಬರ್ಮ, ಬಾಳಪ್ಪ ಮತ್ತು ಚಂದ್ರವ್ವ ರವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-6 ರಿಂದ 10 ಎಂದು ಗುರುತಿಸಲಾಯಿತು. ನಾನು ಎರಡು ಕುಟುಂಬ ಉತ್ತರ ಜೀವಿತ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-11 ಮತ್ತು 12 ಎಂದು ಗುರುತಿಸಲಾಯಿತು. ನಾನು 5 ಕಂದಾಯ ಪಾವತಿ ರಶೀದಿಗಳನ್ನು ಮತ್ತು ಕಂದಾಯ ಪಾವತಿ ಬಗ್ಗೆ ನೀಡಿದ ಡಿಮ್ಯಾಂಡ್ ನೋಟಿಸನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ -13 ರಿಂದ 18 ಎಂದು ಗುರುತಿಸಲಾಯಿತು. ನಾನು ಎಂ.ಆರ್.ಸಂಖ್ಯೆ 149/2010-11, ಎಂ.ಆರ್.ಸಂಖ್ಯೆ ಹೆಚ್.137/2015-16, ಎಂ.ಆರ್.ಸಂಖ್ಯೆ ಹೆಚ್ .8/2019-20, ಎಂ.ಆರ್.ಸಂಖ್ಯೆ 123/2007-08, ಎಂ.ಆರ್.ಸಂಖ್ಯೆ 860/2006-07 ರ ಆನ್ ಲೈನ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ -19 ರಿಂದ 23 ಎಂದು ಗುರುತಿಸಲಾಯಿತು. ನಾನು ಫಾರಂ ನಂ.7, 10 ಮತ್ತು ಭೂ ನ್ಯಾಯ ಮಂಡಳಿಯ ಆದೇಶದ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ -24 ರಿಂದ 26 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ ಸರಿಯಿದೆ.

ಸಹಿ/-

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.